ಬಿ) ಮೇಲ್ಕಂಡ ಅವಧಿಯಲ್ಲಿನ ರಾಷ್ಟ್ರೀಯ ತಲಾದಾಯದ ಪ್ರಮಾಣವೆಷ್ಟು ?

ಸಿ) ರಾಷ್ಟ್ರೀಯ ಮಟ್ಟದಲ್ಲಿ ತಲಾದಾಯದ ಆಧಾರದ ಮೇಲೆ ರಾಜ್ಯದ ಸ್ಥಾನಮಾನವೇನು ?

ಶ್ರೀ ಎಂ. ರಾಜಶೇಖರಮೂರ್ತಿ (ಹಣಕಾಸು ಮತ್ತು ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಮಂತ್ರಿಗಳು).—

ಎ) ೧೯೮೭–೮೮ ರಿಂದ ೧೯೮೯–೯೦ರ ವರೆಗಿನ ಕರ್ನಾಟಕ ರಾಜ್ಯದ ತಲಾದಾಯ ಈ ಕೆಳಕಂಡಂತಿರುವುದು.

ವರ್ಷ	ತಲಾದಾಯ (ರೂ.ಗಳಲ್ಲಿ)	
	ಪ್ರಸಕ್ತ ಬೆಲೆಗಳಲ್ಲಿ	ಸ್ಥಿರ (೧೯೮೦–೮೧ರ) ಬೆಲೆಗಳಲ್ಲಿ
೧೯೮೭–೮೮ (ಪಿ) *	೩೨೧೩	೧೯೧೪
೧೯೮೮–೮೯ (ಕ್ಯೂ) *	೩೬೦೨	೨೦೪೧
೧೯೮೯–೯೦ (ಎ. ಇ.) *	೩೯೫೫	೨೧೦೧

ಬಿ) ಮೇಲ್ಕಂಡ ಅವಧಿಯಲ್ಲಿ ರಾಷ್ಟ್ರೀಯ ತಲಾದಾಯವು ಈ ಕೆಳಕಂಡಂತೆ ಇರುವುದು.

ವರ್ಷ	ತಲಾದಾಯ (ರೂ.ಗಳಲ್ಲಿ)	
	ಪ್ರಸಕ್ತ ಬೆಲೆಗಳಲ್ಲಿ	ಸ್ಥಿರ (೧೯೮೦–೮೧ರ) ಬೆಲೆಗಳಲ್ಲಿ
೧೯೮೭–೮೮ (ಕ್ಯೂ)*	೩೨೮೪	೧೯೧೪
೧೯೮೮–೮೯	ಲಭ್ಯವಿರುವುದಿಲ್ಲ	
೧೯೮೯–೯೦		

ಸಿ) ೧೯೮೭–೮೭ರ ಪ್ರಸಕ್ತ ಬೆಲೆಗಳಲ್ಲಿ ತಲಾದಾಯ ಆಧಾರದ ಮೇಲೆ ರಾಜ್ಯವು ೧೧ನೇ ಸ್ಥಾನದಲ್ಲಿರುವುದು. (ಎಲ್ಲಾ ರಾಜ್ಯಗಳ ಹಾಗೂ ಕೇಂದ್ರಾಡಳಿತಗಳ ಹೋಲಿಕೆಯು ಅಂದಾಜುಗಳು ೧೯೮೭–೮೮ನೇ ವರ್ಷಕ್ಕೆ ಮಾತ್ರ ಲಭ್ಯವಿರುತ್ತದೆ.)

* ಪಿ: ಭಾಗಶಃ ಪರಿಷ್ಕರಿಸಿದ ಅಂದಾಜುಗಳು.
ಕ್ಯೂ. ಶೀಘ್ರ ಅಂದಾಜುಗಳು.
ಎ. ಇ. ನಿರೀಕ್ಷಿತ ಅಂದಾಜುಗಳು.

ದಕ್ಷಿಣ ಕನ್ನಡದಲ್ಲಿರುವ ನ್ಯಾಯ ಬೆಲೆಯ ಅಂಗಡಿಗಳು

೩೧೧. ಶ್ರೀ ಬಿ.ಎಂ. ಇದಿನಬ್ಬ(ಉಲ್ಲಾಳ).—ಅನ್ನ ಆಹಾರ ಮತ್ತು ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣಕನ್ನಡ ಜಿಲ್ಲೆಯಲ್ಲಿ ಇರುವ ನ್ಯಾಯಬೆಲೆಯ ಅಂಗಡಿಗಳ ಸಂಖ್ಯೆ (೧೯೮೯ ಡಿಸೆಂಬರ್ ಅಂತ್ಯದವರೆಗೆ ಎಷ್ಟು ?

ಆ) ಇದರಲ್ಲಿ ಸಹಕಾರಿ, ಖಾಸಗಿ ಹಾಗೂ ಸಂಘ ಸಂಸ್ಥೆಗಳು ನಡೆಸುವ ನ್ಯಾಯ ಬೆಲೆ ಅಂಗಡಿಗಳ ಸಂಖ್ಯೆ ಎಷ್ಟು ?

ಇ) ಈ ನ್ಯಾಯ ಬೆಲೆಯ ಅಂಗಡಿಗಳಲ್ಲಿ ಗ್ರಾಹಕರಿಗೆ ವಂಚನೆ ಮಾಡಿದ ಪ್ರಕರಣಗಳು ಇದೆಯೆ ?

ಈ) ಈ ಪ್ರಕರಣಗಳು ಇದ್ದಲ್ಲಿ ಅವುಗಳ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ?

ಉ) ಗ್ರಾಹಕರ ಹಿತಕ್ಕಾಗಿ ಬಿರುಸಿನ ತಪಾಸಣೆ ತನಿಖೆ ಕಾಲಕಾಲಕ್ಕೆ ಮಾಡಲಾಗುವುದೆ ?

ಶ್ರೀ ಕೆ. ಜೆ. ಜಾರ್ಜ್ (ಆಹಾರ ಮತ್ತು ನಾಗರಿಕ ರಾಜ್ಯ ಸಚಿವರು).—

ಅ) ೮೫೮.

ಆ) ಸಹಕಾರಿ ಸಂಘ ಸಂಸ್ಥೆ ... ೫೭೯
ಖಾಸಗಿ ... ೨೭೬
ಇತರ ... ೩
(ಯಂತ್ರಕ ಮಂಜಳಿ)

ಒಟ್ಟು ೮೫೮

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಹೌದು.

ಬೆಂಗಳೂರು ನಗರದಲ್ಲಿ ಟ್ರಕ್ ಟರ್ಮಿನಲ್ ನಿರ್ಮಾಣ ಮಾಡುವ ಬಗ್ಗೆ

೩೧೨. ಶ್ರೀ ಎಂ. ಎಸ್. ಆತ್ಮಾನಂದ (ಮಂಡ್ಯ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದ ಹೊರವಲಯದಲ್ಲಿ ಟ್ರಕ್ ಟರ್ಮಿನಲ್ ನಿರ್ಮಾಣ ಮಾಡುವ ಯೋಚನೆ ಸರ್ಕಾರದಲ್ಲಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರವು ಈ ದಿಶೆಯಲ್ಲಿ ಯಾವ ಕ್ರಮ ಕೈಗೊಂಡಿದೆ?

ಶ್ರೀ ಕೆ.ಜೆ. ಜಾರ್ಜ್ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ಹೌದು.

ಆ) ಈ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸುತ್ತಿದೆ.

ಮಂಡ್ಯ ಡಿಪೋದಲ್ಲಿ ಬಸ್ಸು ಮತ್ತು ಸಿಬ್ಬಂದಿ ಕೊರತೆಯ ಬಗ್ಗೆ

೪೨೫. ಶ್ರೀ ಎಂ. ಎಸ್. ಆತ್ಮಾನಂದ (ಮಂಡ್ಯ) —ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಡ್ಯ ನಗರದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಡಿಪೋ ಪ್ರಾರಂಭವಾಗಿ ಎಷ್ಟು ಕಾಲವಾಗಿದೆ?

ಆ) ಈ ಡಿಪೋವಿನಲ್ಲಿ ಸಿಬ್ಬಂದಿಯ ಮತ್ತು ಬಸ್ಸಿನ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಈ ಕೊರತೆ ನೀಗಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಈ) ಮಂಡ್ಯ ನಗರದಲ್ಲಿನ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣದ ವಿಸ್ತರಣೆಗೆ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಕೆ.ಜೆ. ಜಾರ್ಜ್ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ದಿನಾಂಕ ೧-೫-೧೯೮೯ ರಂದು.

ಆ) ಡಿಪೋವಿನಲ್ಲಿ ಈಗಿರುವ ಷಡ್ಯೂಲುಗಳ ಓಡಾಟಕ್ಕೆ ಬಸ್ಸು ಮತ್ತು ಸಿಬ್ಬಂದಿಯ ಕೊರತೆ ಯಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಅಂತಹ ಅಗತ್ಯತೆ ಕಂಡು ಬಂದಾಗ ವಿಸ್ತರಿಸಲಾಗುವುದು.